ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ಅಧ್ಯಕ್ಷರೆ, ಅವರು ಸಿಟ್ಟಾಗಬೇಡಿ ಎಂದಿದ್ದು ನಿಮಗಲ್ಲ.

ಅಧ್ಯಕ್ಷರು :- ಇಲ್ಲಾ ನಮ್ಮ ಮುಂದೆ ಇನ್ನು 13 ಪ್ರಶ್ನೆಗಳು ಇವೆ. ಅದಕ್ಕೆ ಏನೋ ಮಾಡೋಣ ಉತ್ತರ ಹೇಳಿ. ನಿಮ್ಮ ತರಹ ಬೇರೆಯವರ ಇಂಪಾರ್ಟೆಂಟ್ ಪ್ರಶ್ನೆಗಳು ಇವೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ, ಅದರಿಂದ ಇನ್ನಷ್ಟು ಪ್ರಶ್ನೆಗಳು ಉದ್ಭವವಾಗುತ್ತಾ ಹೋಗುತ್ತವೆ. ಫೆಲಿಸಿಟೇಟರ್ ಎಂದು ಹೇಳಿದರು ತಾವು ಕೇಂದ್ರ ಸರ್ಕಾರದಿಂದ ದುಡ್ಡು ಬರುತ್ತದೆಂದು ಹೇಳಿದಿರಿ. ಇದು ಪೂರ್ತಿ ರಾಜ್ಯದ ಯೋಜನೆಯೆಂದು ಹೇಳಿದಿರಿ, ಒಟ್ಟಿನಲ್ಲಿ ಇರಲಿ ಬಿಡಿ. ನನ್ನ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟುಬಿಡಿ. ಇವತ್ತು ನೂರಾರು ಕೋಟಿ ರೂ. ಗಳ ವ್ಯವಹಾರ ನಡೆಯುತ್ತಿದೆ. ತಾವು ಕೃಷಿ ಮಾರಾಟ ಇಲಾಖೆಯ ಲೆಕ್ಕ ಪರಿಶೋಧಕ ವಿಭಾಗದಿಂದ ಕೈಗೊಳ್ಳಲಾಗಿದೆ ಎಂದು ಹೇಳಿರುತ್ತೀರಿ. ಕೃಷಿ ಮಾರಾಟ ಇಲಾಖೆಯ ಲೆಕ್ಕಪರಿಶೋಧನಾ ವಿಭಾಗ ಏನಿದೆ ಅದು ಡೈರೆಕ್ಟರ್ ಕೆಳಗಡೆ ಇರುವಂಥದ್ದು. ಇವೆಲ್ಲಾ ಅವರ ಕೈ ಕೆಳಗಡೆ ವ್ಯವಹಾರ ನಡೆಯುತ್ತಿರುವಾಗ, ಈ ಆಡಿಟ್‌ನ್ನು ಏಕೆ ನೀವು ಎಜಿ ಯವರಿಂದ ನಡೆಸಬಾರದು, ಇದನ್ನು ನೀವು ಏಕೆ ಮಾಡಬಾರದು. ಎಜಿ ಯವರಿಂದ ಆಡಿಟ್ ಮಾಡಿಸಬೇಕೆಂದು ನಿಮಗೆ ಏಕೆ ಅನ್ನಿಸಲಿಲ್ಲ?

ಶ್ರೀ ಬಿ.ಎಸ್. ಪಾಟೀಲ್, ಸಾಸನೂರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್‌ರವರ ಸಲಹೆ ಬಹಳ ಸೂಕ್ತವಾಗಿದೆ. ಈ ಆವರ್ತನಿಧಿಯನ್ನು ಪ್ರಾರಂಭ ಮಾಡಿದ್ದು ದಿ: 24.9.1999ನೇ ಸಾಲಿನಿಂದ ಇದು ಎರಡು-ಮೂರು ವರ್ಷವಾಯಿತು. ನಮ್ಮಲ್ಲಿ ಇಂಟರ್‌ನಲ್ ಆಡಿಟರ್ ಇರುವುದರಿಂದ ಅವರ ಮುಖಾಂತರವಾಗಿ ಮಾಡಿಸಿರುತ್ತೇವೆ. ಇನ್ನು ಮುಂದೆ ತಾವು ಹೇಳಿದ ಹಾಗೆ ಇಲಾಖೆಯು 400-600 ಕೋಟಿ ರೂಪಾಯಿಗಳವರೆಗೆ ವ್ಯವಹಾರ ಬೆಳೆದುಕೊಂಡು ಬಂದಾಗ ಆಗ ತಮ್ಮ ಸಲಹೆಯನ್ನು ಗಣನೆಗೆ ತೆಗೆದುಕೊಂಡು ಅಕೌಂಟೆಂಟ್ ಜನರಲ್‌ರವರಿಂದ ಆಡಿಟ್‌ನ್ನು ಮಾಡಿಸುತ್ತೇವೆ.

ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ರಾಸಾಯನಿಕ ಔಷಧ ಸಿಂಪರಣೆ

215(1766) ಶ್ರೀ ಚಿನ್ನಿಗಪ್ಪ ಸಿ. ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಲಿ ರಾಜ್ಯದಲ್ಲಿ ಇರುವ ತೆಂಗಿನ ಮರಗಳು ಮತ್ತು ನುಸಿಪೀಡೆಗೆ ಒಳಗಾದ ತೆಂಗಿನ ಮರಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ನುಸಿಪೀಡೆ ರೋಗಕ್ಕೆ 3 ಸಾರಿ ಉಪಚರಿಸಲು ಅಗತ್ಯವಾಗಿ ಬೇಕಾದ ಔಷಧಿ ಮತ್ತು ಸಲಕರಣೆಗಳಿಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು? ಇಲ್ಲಿಯವರೆಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ನುಸಿಪೀಡೆ ರೋಗ ನಿಯಂತ್ರಣಕ್ಕೆ ಅಗತ್ಯವಾದ ಔಷಧಿ ಮತ್ತು ಸಲಕರಣೆಗಳನ್ನು ಸರ್ಕಾರ ಪೂರೈಸದೆ ಕೇವಲ ಪ್ರಚಾರತಂತ್ರ ಅನುಸರಿಸುತ್ತಿರುವುದು ವಾಸ್ತವವಲ್ಲವೇ? ಇಲ್ಲಾವಾದಲ್ಲಿ ಅಗತ್ಯವಾದ ಔಷಧಿ ಸಲಕರಣೆಗಳನ್ನು ಏಕೆ ಪೂರೈಸಿಲ್ಲ?

ಈ) ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗೆ ಪೂರೈಸಿರುವ ರಾಸಾಯನಿಕ ಔಷಧಿ ಕಳಪೆ ಮಟ್ಟದೆಂದು ಅದನ್ನು ಸಿಂಪರಣೆ ರಿಜೆಕ್ಟ್ ಮಾಡಿದರೆ ರೋಗದಲ್ಲಿ ಏನೂ ಬದಲಾವಣೆ ಆಗುತ್ತಿಲ್ಲವಾದ್ದರಿಂದ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ರಾಜ್ಯದಲ್ಲಿ ಅಂದಾಜು 7 ಕೋಟಿ ತೆಂಗಿನ ಮರಗಳಿರುತ್ತದೆ. ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಲ್ಲಿರುವ ಸುಮಾರು 5 ಕೋಟಿ ತೆಂಗಿನ ಮರಗಳಲ್ಲಿ 4.33 ಕೋಟಿ ಮರಗಳು ನುಸಿಪೀಡೆಗೆ ಒಳಗಾಗಿದೆ ಎಂದು ಅಂದಾಜು ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ನುಸಿಪೀಡೆ ನಿಯಂತ್ರಣಕ್ಕೆ 3 ಸಾರಿ ಉಪಚರಿಸಲು ಅಗತ್ಯವಾಗಿ ಬೇಕಾದ ಔಷಧಿ ಮತ್ತು ಪರಿಕರಗಳಿಗೆ ರೂ. 172 ಕೋಟಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿತ್ತು. ಈ ಬಾಬ್ತು ರೂ. 11.44 ಕೋಟಿ ಬಿಡುಗಡೆಯಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ನುಸಿಪೀಡೆ ನಿಯಂತ್ರಣಕ್ಕೆ ರೂ. 11.44 ಕೋಟಿಗಳನ್ನು ಖರ್ಚು ಮಾಡಿ ಸಾಕಷ್ಟು ಔಷಧಿ ಮತ್ತು ಪರಿಕರಗಳನ್ನು ಜಿಲ್ಲೆಗಳಿಗೆ ಒದಗಿಸಲಾಗಿತ್ತು. ಆದ್ದರಿಂದ ಇದು ಕೇವಲ ಪ್ರಚಾರ ತಂತ್ರವಾಗಿರುವುದಿಲ್ಲ. ಔಷಧೋಪಚಾರ ಪ್ರಗತಿಯಲ್ಲಿದ್ದಾಗ ಕೇವಲ ರಾಸಾಯನಿಕ ಕೀಟನಾಶಕಗಳ ಉಪಚಾರದಿಂದ ನುಸಿ ನಿಯಂತ್ರಣ ಆಗುವುದಿಲ್ಲವೆಂದು ತಜ್ಞರು ನೀಡಿದ ಸಲಹೆ ಮೇರೆಗೆ ರಾಸಾಯನಿಕ ಕೀಟನಾಶಕಗಳ ಉಪಚಾರ ನಿಲ್ಲಿಸಿ ತೆಂಗಿನ ಮರಗಳ ಆರೋಗ್ಯದ ಹಿತದೃಷ್ಟಿಯಿಂದ ಪರಿಸರಪೂರಕ ಜೈವಿಕ ಕೀಟನಾಶಕಗಳನ್ನು ಹಾಗೂ ತೆಂಗಿನ ಮರಗಳನ್ನು ನುಸಿನಿರೋಧಕ ಶಕ್ತಿಯನ್ನು ವೃದ್ಧಿಸಲು ಸಮರ್ಪಕ ಪೋಷಕಾಂಶಗಳ ನಿರ್ವಹಣೆ ಪದ್ಧತಿಯನ್ನು 100 ಬ್ಲಾಕ್ ಪ್ರಾತ್ಯಕ್ಷತೆ ಕಾರ್ಯಕ್ರಮದಲ್ಲಿ ಅಳವಡಿಸಲಾಗಿದೆ.

ಈ) ರಾಸಾಯನಿಕ ಔಷಧಿ ಸಿಂಪರಣೆಯನ್ನು ಸರ್ಕಾರವು ಈಗ ನಿಲ್ಲಿಸಿದೆ. ತೆಂಗಿನ ಮರಗಳ ಆರೋಗ್ಯವನ್ನು ಕಾಪಾಡುವುದರಿಂದ ನುಸಿ ನಿಯಂತ್ರಣೆಯ ನಿರೋಧಕ ಶಕ್ತಿ ಹೆಚ್ಚುವುದಾಗಿ ತಜ್ಞರು ಸಲಹೆ ನೀಡಿದ್ದರಿಂದ ಪರಿಸರ ಪೂರಕ ಜೈವಿಕ ಕೀಟನಾಶಕಗಳನ್ನು ಹಾಗೂ ಸಮಗ್ರ ಪೋಷಕಾಂಶ ನಿರ್ವಹಣೆ ಪದ್ಧತಿಯನ್ನು ಬ್ಲಾಕ್ ಪ್ರಾತ್ಯಕ್ಷತೆ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು, ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯದ ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಲ್ಲಿರುವ ಒಟ್ಟು ತೆಂಗಿನ ಮರಗಳು ನುಸಿ ಭಾದೆಗೆ ತುತ್ತಾಗಿರುವ ಮರಗಳ ಸಂಖ್ಯೆ ಹಾಗೂ ಬಿಡುಗಡೆಯಾದ ಅನುದಾನ

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು ತೆಂಗಿನ ಮರಗಳ ಸಂಖ್ಯೆ (ಲಕ್ಷ ಸಂಖ್ಯೆಗಳಲ್ಲಿ)	ನುಸಿಬಾಧೆಗೆ ತುತ್ತಾಗಿರುವ ಮರಗಳ ಸಂಖ್ಯೆ (ಲಕ್ಷ ಸಂಖ್ಯೆಗಳಲ್ಲಿ)	ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ)
1.	ಬೆಂಗಳೂರು ನಗರ	8.62	8.60	56.34
2.	ಬೆಂಗಳೂರು ಗ್ರಾಮಾಂತರ	44.70	42.48	74.76

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು ತೆಂಗಿನ ಮರಗಳ ಸಂಖ್ಯೆ (ಲಕ್ಷ ಸಂಖ್ಯೆಗಳಲ್ಲಿ)	ನುಸಿಬಾಧೆಗೆ ತುತ್ತಾಗಿರುವ ಮರಗಳ ಸಂಖ್ಯೆ (ಲಕ್ಷ ಸಂಖ್ಯೆಗಳಲ್ಲಿ)	ಬಿಡುಗಡೆಯಾದ ಅನುದಾನ (ಲಕ್ಷ ರೂ. ಗಳಲ್ಲಿ)
3.	ಮಂಡ್ಯ	58.31	43.67	130.60
4.	ಮೈಸೂರು	30.03	24.02	42.00
5.	ಕೋಲಾರ	20.01	18.26	113.52
6.	ತುಮಕೂರು	130.04	122.20	171.00
7.	ಚಾಮರಾಜನಗರ	16.90	15.45	19.20
8.	ಚಿತ್ರದುರ್ಗ	30.00	28.00	135.40
9.	ದಾವಣಗೆರೆ	20.88	12.60	13.80
10.	ಶಿವಮೊಗ್ಗ	13.16	5.53	21.42
11.	ಚಿಕ್ಕಮಗಳೂರು	44.50	42.00	63.60
12.	ಹಾಸನ	82.42	69.86	99.72
13.	ಗದಗ, ಬಳ್ಳಾರಿ, ಹಾವೇರಿ, ಕೊಪ್ಪಳ, ರಾಯಚೂರು, ದ. ಕನ್ನಡ, ಬೆಳಗಾಂ, ಉಡುಪಿ, ಧಾರವಾಡ	200.33	-	20.64
14.	ತೋ.ಉ.ನಿ., (ಸಸ್ಯ ಸಂರಕ್ಷಣೆ), ಲಾಲ್‌ಬಾಗ್ (ಪರಿಕರಗಳ ಸರಬರಾಜಿಗೆ)	-	-	182.00
	ಒಟ್ಟು	699.00	432.68	1144.00

ಶ್ರೀ ಸಿ. ಚನ್ನಿಗಪ್ಪ :- ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸುಮಾರು 43,268 ತೆಂಗಿನ ಮರಗಳನ್ನು ರೈತರು ಬಹಳ ಕಷ್ಟಪಟ್ಟು ಬೆಳೆದು, ಅದರ ಮೇಲೆ ಇವತ್ತು ಜೀವನವನ್ನು ಆರ್ಥಿಕವಾಗಿ ಮಾಡಿಕೊಂಡಿದ್ದಾರೆ. ಇಲ್ಲಿ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ನಾವು 11.44 ಕೋಟಿ ರೂ. ಗಳನ್ನು ಖರ್ಚು ಮಾಡಿ ಔಷಧಿಯನ್ನು ಕೊಂಡುಕೊಂಡಿದ್ದೇವೆ. ಅವರನ್ನು ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಪಡುತ್ತೆನೆ. ಈ 11.44 ಕೋಟಿ. ರೂ.ಗಳನ್ನು ಔಷಧಿಯನ್ನು ರೈತರಿಗೆ ಕೊಡಬೇಕಾಗಿದ್ದು ವಿಥೌಟ್ ಎಕ್ಸ್‌ಪೆರಿಮೆಂಟೇಶನ್ ಔಷಧಿಯನ್ನು ರೈತರಿಗೆ ಕೊಟ್ಟು ಇವತ್ತು ಲಕ್ಷಾಂತರ ತೆಂಗಿನ ಮರಗಳು ಎಲ್ಲವೂ ನಾಶವಾಗಿದೆ. ನಮ್ಮ ತಾಲ್ಲೂಕಿನಲ್ಲಿ ಇವತ್ತು ಸುಮಾರು 12-13 ಸಾವಿರ ತೆಂಗಿನ ಮರಗಳು ಒಣಗಿ ಹೋಗಿವೆ.

ಈ ಒಂದು ಅನ್ಯಾಯವನ್ನು ಈ ಸರ್ಕಾರ ರೈತರನ್ನು ಉಳಿಸುತ್ತೇವೆ, ರೈತರಿಗೆ ನಾವು ಬೆಂಬಲವಾಗಿದ್ದೇವೆ ಎಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಔಷಧಿಯನ್ನು ಕೊಡುವ ಮುಖೇನ ರೈತರ ತೆಂಗಿನ ಮರಗಳನ್ನು ಸಾಯಿಸಿ ಅನೇಕ ರೈತರ ಕುಟುಂಬವನ್ನು ಸಾಯಿಸಿದೆ ಸರ್ಕಾರ. ಅದಕ್ಕೆ ಅವರು ಯಾವ ರೀತಿಯಾದ ಉತ್ತರವನ್ನು ಕೊಡುತ್ತಾರೆ. ನೀವು ಕೊಡತಕ್ಕಂಥ ಔಷಧಿಯನ್ನು ಎಲ್ಲಿ ಪರೀಕ್ಷೆ ಮಾಡಿಸಿರುತ್ತೀರಿ, ವೈಜ್ಞಾನಿಕವಾಗಿ ತಂತ್ರಜ್ಞಾನವನ್ನು ಮೊಟ್ಟಮೊದಲನೆಯದಾಗಿ ಅಳವಡಿಸಿರುತ್ತೀರಿ ಅದನ್ನು ಹೇಗೆ ಮಾಡಿರುತ್ತೀರಿ ಎನ್ನುವುದನ್ನು ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಚಿನ್ನಿಗಪ್ಪನವರು ಪ್ರಸ್ತಾಪ ಮಾಡಿರತಕ್ಕಂಥದ್ದರಲ್ಲಿ ರಾಜ್ಯದಲ್ಲಿ ತೆಂಗಿನ ಮರಗಳಿಗೆ ಹಿಂದೆ ನುಸಿ ರೋಗ ಬಂದಿದೆ ಎನ್ನತಕ್ಕಂಥ ಸಂದರ್ಭದಲ್ಲಿ ಅದನ್ನು ನಿಯಂತ್ರಣ ಮಾಡಬೇಕು ಎನ್ನುವ ಬಗ್ಗೆ ಬಂದಾಗ ಅವರು ಹೇಳಿದ ರೀತಿಯಲ್ಲಿ ಇಲಾಖೆಯ ವತಿಯಿಂದಾಗಲಿ ಅಥವಾ ಬೇರೆ ಯಾರಿಂದಾಗಲಿ ಔಷಧಿಯನ್ನು ಹೊಡೆಯತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಇದಕ್ಕೋಸ್ಕರ ರಾಜ್ಯಮಟ್ಟದ ಒಂದು ತಾಂತ್ರಿಕ ಸಲಹಾ ಸಮಿತಿ ಇದೆ. ತಾಂತ್ರಿಕ ಸಲಹಾ ಸಮಿತಿಯಲ್ಲಿ ಯಾರು ಇದಕ್ಕೆ ಈ ಕೃಷಿ ನಿಯಂತ್ರಣಕ್ಕೆ ಕೀಟನಾಶಕಗಳನ್ನು ಭಳಸಬಹುದು ಎನ್ನುವುದರ ಬಗ್ಗೆ ಯಾವ ವಿಜ್ಞಾನಿಗಳು ಬಹಳ ಪ್ರವೀಣರಾಗಿದ್ದಾರೆ ಅವರು ಎಲ್ಲರೂ ಇರತಕ್ಕಂಥ ಒಂದು ಸಮಿತಿಯವರು ವರದಿಯನ್ನು ಕೊಟ್ಟ ಆಧಾರದ ಮೇಲೆ ಯಾವ ಔಷಧಿಗಳನ್ನು ಈ ತೆಂಗಿನ ಮರಗಳಿಗೆ ನುಸಿ ರೋಗವನ್ನು ನಿಯಂತ್ರಣಕ್ಕೆ ಸಿಂಪಡಣೆ ಮಾಡಬೇಕೆಂದಾಗ ಮಾಡಿರುವಂಥದ್ದು, ಒಂದು ವಿಚಾರವಾಗಿದೆ. ಈ ವಿಚಾರದಲ್ಲಿ ತಮಗೆ ಗೊತ್ತಿದ್ದ ಹಾಗೆ ಈ ಒಂದು ಸದನದಲ್ಲಿ ಮತ್ತು ಮೇಲ್ಮನೆಯ ಒಂದು ಸದನದಲ್ಲಿ ಇದರ ಬಗ್ಗೆ ಬಹಳ ಸುದೀರ್ಘವಾಗಿ ಚರ್ಚೆಯಾಗಿ ಇದಕ್ಕೆ ಸಾಕಷ್ಟು ಉತ್ತರಗಳನ್ನು ಹಿಂದೆಯೇ ಕೊಡಲಾಗಿದೆ. ಇಷ್ಟೆಲ್ಲಾ ಮಾಡಿದ ಮೇಲೆ ಈಗ ನುಸಿಯನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯತೆ ಇಲ್ಲ ಎನ್ನತಕ್ಕಂಥ ಮನವರಿಕೆಯಾದ ಮೇಲೆ ಹಿಂದೆ ರಾಸಾಯನಿಕ ಒಂದು ಔಷಧಿಯನ್ನು ಕೊಡತಕ್ಕಂಥ ಒಂದು ಪದ್ಧತಿ ಇತ್ತು. ಅದನ್ನು ಕೊಡುವಾಗಲಿಂದ ಈ ತೆಂಗಿನ ಗಿಡಿಗಳಿಗೆ ಇದು ಸೂಕ್ತವಲ್ಲ ಎನ್ನತಕ್ಕಂಥದ್ದು ಕಂಡು ಬಂದಾಗ, ರೈತರಿಗೂ ಕೂಡ ಇದು ಸಾಕಷ್ಟು ಪರಿಣಾಮಕಾರಿಯಾದದ್ದು ಅಲ್ಲವೆಂದು ಕಂಡು ಬಂದಾಗ ಅದನ್ನು ಹೊಡೆಯತಕ್ಕಂಥದ್ದನ್ನು ನಿಲ್ಲಿಸಲಾಯಿತು. ಅದನ್ನು ನಿಲ್ಲಿಸಿದ ಮೇಲೆ ಸರ್ಕಾರ ಒಂದು ತೀರ್ಮಾನಕ್ಕೆ ಬಂತು, ಈ ಪರಿಸರಪೂರಕವಾದಂಥ ಒಂದು ನಿರ್ವಹಣೆಯಿಂದ ಇದನ್ನು ಮಾಡುವುದಕ್ಕೆ ಸಾಧ್ಯತೆ ಇದೆ ಎಂದ ಮೇಲೆ ಈಗ ರಾಜ್ಯ ಸರ್ಕಾರ ಮೂರು ಕಡೆ ಡೆಮಾನ್‌ಸ್ಟ್ರೇಶನ್ ಮಾಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಡೆಮಾನ್‌ಸ್ಟ್ರೇಶನ್ ಎಂದು ಹೇಳಿದರೆ, ಒಂದು ಪ್ರದೇಶದಲ್ಲಿ ಸುಮಾರು 3 ಸಾವಿರ ಗಿಡಗಳು ಇರತಕ್ಕಂಥ ಒಂದು ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ರೈತರಿಗೆ ತರಬೇತಿಯನ್ನು ಕೊಡತಕ್ಕಂಥದ್ದು, ಪರಿಸರಕ್ಕೆ ಸಂಬಂಧಪಟ್ಟ ರೀತಿಯಲ್ಲಿ ಯಾವುದಕ್ಕೆ ನಾವು ಔಷಧಿಗಳನ್ನು ಹಾಕಬೇಕು ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ರಾಜ್ಯಸರ್ಕಾರ ಮಾಡಬೇಕೆಂದು ಯೋಚನೆಯನ್ನು ಮಾಡಿಕೊಂಡಿತ್ತು. ಈ ವಿಚಾರದಲ್ಲಿ ಮಾನ್ಯ ಚಿನ್ನಿಗಪ್ಪನವರು ಪ್ರಸ್ತಾಪ ಮಾಡಿದ ಹಾಗೆ ಹಿಂದೆ ತೆಂಗಿನ ಗಿಡಗಳಿಗೆ ಔಷಧಿಯನ್ನು ಸಿಂಪಡಣೆ ಮಾಡಿದಾಗಲೂ ಕೂಡ ಯಾವ ಗಿಡಗಳು ಸತ್ತಿಲ್ಲವೆನ್ನುವ ಬಗ್ಗೆ ನಾವು ವರದಿಯನ್ನು ಕೂಡ

ತರಿಸಿಕೊಂಡಿದ್ದೇವೆ. ಅದನ್ನು ನಾವು ಕೇವಲ ನಮ್ಮ ಇಲಾಖೆಯಿಂದ ಮಾತ್ರ ತರಿಸಿಕೊಂಡಿದ್ದು ಅಲ್ಲ, ನಮ್ಮ ಕೃಷಿ ವಿಶ್ವವಿದ್ಯಾಲಯದ ತಾಂತ್ರಿಕ ತಜ್ಞರನ್ನು ನಾವು ಕಳುಹಿಸಿಕೊಟ್ಟು ಅವರ ಮೂಲಕವಾಗಿ ನಾವು ವರದಿಯನ್ನು ತರಿಸಿಕೊಂಡಿರುತ್ತೇವೆ. ಅಲ್ಲಿ ಇಲ್ಲಿ ಏನಾದರೂ ಒಂದು ವೇಳೆ ಇಂತಹ ಪರಿಸ್ಥಿತಿಯಾಗಿದೆ ಎಂದು ಕಂಡ ಬಂದ ಸಂದರ್ಭದಲ್ಲಿ ಇಲಾಖೆಯು ಕೂಡ ಸ್ಪಂದನೆ ಮಾಡಿರತಕ್ಕಂಥ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

4.10 ಪಿ.ಎಂ.

ಶ್ರೀ ಸಿ. ಚೆನ್ನಿಗಪ್ಪ :- ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಸಚಿವರು ಭಾರಿ ಉತ್ತಮವಾದ ಒಂದು ಸ್ಥಾನದಲ್ಲಿ ಈ ರಾಜ್ಯದಲ್ಲಿ ಅವರು ಕುಳಿತುಕೊಂಡವರು, ಅವರನ್ನು ನಾನು ಸ್ವಾಗತ ಮಾಡುತ್ತೇನೆ. ಯಾವ ಮರ ಹಾಳಾಗಿಲ್ಲ, ಯಾವ ಮರಗಳು ಹಾಳಾಗಿ ಹೋಗಿಲ್ಲವೆಂದು ಹೇಳಿದ್ದಾರಲ್ಲಾ, ದಯಮಾಡಿ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ನನ್ನ ಮರಗಳಿಗೆ ನಾನೇ ಇಂಜೆಕ್ಷನ್ ಮಾಡಿದ್ದೇನೆ. 165 ತೆಂಗಿನ ಮರಗಳು ನನ್ನ ಮನೆಯ ಮುಂದೆ ಇರುವಂಥವುಗಳು ಅವುಗಳು ಸತ್ತು ಹೋಗಿವೆ, ತಾವು ದಯಮಾಡಿ ಬಂದು ನೋಡಿ. ಒಣಗಿ ಹೋಗಿವೆ, ನಾನು ಸುಳ್ಳು ಹೇಳುವುದಿಲ್ಲ, ನಾನು ರೈತನ ಮಗನಾಗಿರುತ್ತೇನೆ. ಮಾನ್ಯ ಸಚಿವರೂ ಕೂಡ ರೈತರ ಮನೆಯಿಂದ ಬಂದವರು. ಈ ತರಹ ದಯಮಾಡಿ ಸುಳ್ಳು ಹೇಳಿಕೆಯನ್ನು ಕೊಡಬಾರದು. ವೈಜ್ಞಾನಿಕವಾಗಿ, ಸರ್ಕಾರಕ್ಕೆ ಮಿಸ್‌ಗೈಡ್ ಮಾಡಿರುವುದರಿಂದ ಒಂದೆರಡು ಕಡೆ ಆಗಿದೆ, ಬೇಕಾದರೆ ಹೇಳಲಿ ಅದನ್ನು ಒಪ್ಪಿಕೊಳ್ಳಬಹುದು. ಆದರೆ ಆಗಿಯೇ ಇಲ್ಲ, ಔಷಧಿಯನ್ನು ಕೊಡಬೇಕಾದರೆ, ತಮ್ಮ ಮುಖಾಂತರ ನಾನು ಅವರನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದನ್ನು ಟೆಸ್ಟ್ ಮಾಡದೇ, ವೈಜ್ಞಾನಿಕವಾಗಿ ಅದನ್ನು ಪರಿಶೀಲನೆ ಮಾಡದೆ, ಪರೀಕ್ಷೆ ಮಾಡದೇ ಹೇಗೆ ಕೊಟ್ಟರು? ತೆಂಗಿನ ಮರಗಳನ್ನು ಕಳೆದುಕೊಂಡಂಥ ರೈತರಿಗೆ ಈ ಸರ್ಕಾರ ಏನಾದರೂ ಕಾಂಪೆನ್‌ಶೇಷನ್ ಕೊಡುತ್ತದೆಯೇ ಅಥವಾ ಆಗಿರುವ ಅನ್ಯಾಯಕ್ಕೆ ಅವರು ರೈತರ ಕ್ಷಮಾಪಣೆಯನ್ನು ಕೇಳುತ್ತಾರೆಯೇ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ಇದನ್ನು ಹೇಳುವಾಗ ನಾನು ತಮಗೆ ಹೇಳುವ ರೀತಿಯಲ್ಲಿ ಇದರಲ್ಲಿ ಯಾವ ಸುಳ್ಳು ಹೇಳತಕ್ಕಂಥ ಸಂಭವ ಇಲ್ಲ. ಏಕೆಂದರೆ ಈ ತೆಂಗಿನ ಗಿಡಗಳು, ತಮಗೆ ಉತ್ತರ ಕೊಟ್ಟಿರುವುದರಲ್ಲಿ ಸುಮಾರು 7 ಕೋಟಿ ತೆಂಗಿನ ಮರಗಳು ಇವೆ. ಇದರಲ್ಲಿ ನಮಗೆ ನುಸಿ ಬಂದಿರತಕ್ಕಂಥದ್ದರಲ್ಲಿ 4 ಕೋಟಿ ಮರಗಳಿಗೆ ಎನ್ನುವುದರ ಬಗ್ಗೆ ನಮಗೆ ಅಂಕಿ ಅಂಶಗಳು ಇವೆ. ತೆಂಗಿನ ಗಿಡಗಳು ಔಷಧಿಯನ್ನು ಕೊಟ್ಟಾಗಲೇ ಸತ್ತಿವೆ ಎನ್ನುವಂಥದ್ದು ವರದಿ ಇಲ್ಲವೆಂದು ಹೇಳಬೇಕಾಗುತ್ತದೆ. ತೆಂಗಿನ ಮರಗಳು ಔಷಧಿಯನ್ನು ಕೊಟ್ಟಿದ್ದಕ್ಕಾಗಿಯೇ ಸತ್ತಿವೆ ಎನ್ನುವುದರ ಬಗ್ಗೆ ಯಾವ ವರದಿ ಇಲ್ಲವೆನ್ನುವ ಮಾತನ್ನು ಹೇಳಬೇಕಾಗುತ್ತದೆ. ತೆಂಗಿನ ಮರಗಳು ಸತ್ತಿರಬೇಕು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಔಷಧಿಯನ್ನು ಸಿಂಪಡಣೆ ಮಾಡುವಾಗ ಆ ಸಂದರ್ಭದಲ್ಲಿ ನಮಗೂ ಕೂಡ ಮಾನ್ಯ ಎಲ್ಲಾ ಸದಸ್ಯರಿಗೂ ಕೂಡ ಗೊತ್ತಿದೆ. ಇಡೀ ರಾಜ್ಯದಲ್ಲಿ ರಾಜ್ಯ ಸರ್ಕಾರ ನುಸಿ ರೋಗ ಬಂದಿದೆ ಎನ್ನುವ ಮನವರಿಕೆಯಾದಾಗ ಇಡೀ ರಾಜ್ಯದಲ್ಲಿ ಪಲ್ಸ್‌ಪೊಲಿಯೋ ಮಾದರಿಯಲ್ಲಿ ಈ ತೆಂಗಿನ

ಮರಗಳಿಗೆ ಔಷಧಿಯನ್ನು ಸಿಂಪಡಣೆ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಆ ಸಂದರ್ಭದಲ್ಲಿ ಈ ಜಿಲ್ಲಾಮಟ್ಟದ ತಂಡಗಳನ್ನು ರಚನೆ ಮಾಡಿ, ತಾಲ್ಲೂಕುಮಟ್ಟದ ತಂಡಗಳ ರಚನೆ ಮಾಡಿ ಯಾವ ರೀತಿಯ ಔಷಧಿಗಳನ್ನು ಸಿಂಪಡಣೆ ಮಾಡಬೇಕು ಎನ್ನುವುದರ ಬಗ್ಗೆ ಸಲಹೆಗಳನ್ನು ಕೊಡಲಾಯಿತು. ಆ ಸಂದರ್ಭದಲ್ಲಿ ತೆಂಗಿನ ಗಿಡಗಳಿಗೆ ಔಷಧಿಗಳನ್ನು ಸಿಂಪೆಡಣೆ ಮಾಡುವಾಗ ಯಾವ ರೀತಿಯಲ್ಲಿ ಔಷಧಿಯನ್ನು ಸ್ಪೆಮ್ ಇಂಜೆಕ್ಷನ್ ಕೊಡಬೇಕು ಎನ್ನುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವುದನ್ನು ನಾನು ಮನವರಿಕೆ ಮಾಡಿಕೊಂಡಿರುತ್ತೇನೆ. ಗಿಡಗಳು ಸತ್ತಿರಬಹುದು; ಇದೇ ಕಾರಣಕ್ಕಾಗಿ ಸತ್ತಿವೆ ಎಂದಾಗ ನಾವು ಅಧಿಕಾರಿಗಳು ಕಳುಹಿಸಿ, ವಿಜ್ಞಾನಿಗಳನ್ನು ಕಳುಹಿಸಿ ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆ ನಾನು ಇದನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಇದರಿಂದಲೇ ಸತ್ತಿದೆ ಎನ್ನುವುದು ಕಂಡು ಬಂದರೆ, ಇದಕ್ಕೆ ಪರಿಹಾರವನ್ನು ನೀಡತಕ್ಕಂಥ ಒಂದು ಅವಕಾಶವನ್ನು ಕೂಡ ನಾವು ಹಾಕಿಕೊಂಡಿಲ್ಲ, ನೀವು ಇಲಾಖೆಯ ವತಿಯಿಂದ ಏನು ಮಾಡಿದ್ದೇವೆ ಎಂದರೆ, ಇದನ್ನು ಸಮಗ್ರವಾಗಿ ಈ ನುಸಿ ನಿಯಂತ್ರಣ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವುದನ್ನು ಬಹಳ ಸಮರ್ಥವಾದ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೆ, ಸುಮಾರು 11.44 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿರುತ್ತೀರಿ. ಇಷ್ಟು ಹಣ ಔಷಧಿಗೋಸ್ಕರ ಖರ್ಚಾಗಿದೆ. ಈ ಔಷಧಿಯನ್ನು ಕೊಂಡುಕೊಂಡಿರತಕ್ಕಂಥದ್ದು ಯಾವ ವಿಧಾನ. ಏಕೆಂದರೆ ಟ್ರಾನ್ಸ್ಫೆರೆನ್ಸಿ ಆಕ್ಟ್ ಕೂಡ ನಿಮ್ಮಲ್ಲಿ ಜಾರಿಯಲ್ಲಿರುತ್ತದೆ. ಅದನ್ನು ಅಳವಡಿಸಿಕೊಂಡು ನೀವು ಔಷಧಿಯನ್ನು ಕೊಂಡುಕೊಂಡಿದ್ದೀರೋ ಅಥವಾ ಇದನ್ನು ಹೊರತುಪಡಿಸಿ ಔಷಧಿಯನ್ನು ಕೊಂಡುಕೊಂಡಿದ್ದೀರೋ ಎನ್ನುವುದನ್ನು ದಯವಿಟ್ಟು ತಿಳಿಸಿ. ಇದರ ಜೊತೆಗೆ ಕೆಲವರಿಗೆ ಮರಗಳಿಗೆ ಇಂಜೆಕ್ಟ್ ಮಾಡತಕ್ಕಂಥದ್ದಕ್ಕೆ ಕಂಟ್ರಾಕ್ಟ್ ಕೊಟ್ಟಿರತಕ್ಕಂಥದ್ದು ನಿಜವೇ? ಕಂಟ್ರಾಕ್ಟ್ ಕೊಟ್ಟಿದ್ದರೆ ಒಂದು ಮರಕ್ಕೆ ಎಷ್ಟು ನಿಗದಿಪಡಿಸಿದ್ದೀರಿ. ಅದನ್ನು ನಿಗದಿಪಡಿಸಿರತಕ್ಕಂಥದ್ದರಲ್ಲಿ ಯಾವ ಆಧಾರದ ಮೇಲೆ ಅವರನ್ನು ನೀವು ಸೆಲೆಕ್ಟ್ ಮಾಡಿದಿರಿ? ಅವರಿಗೆ ಕೊಟ್ಟಿರತಕ್ಕಂಥ ಹಣವೆಷ್ಟು? ಅದರಲ್ಲಿ ಈ 11.44 ಕೋಟಿ ರೂ.ಗಳು ಸೇರಿದೆಯಾ?

ಶ್ರೀ ಎಂ. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ಇದೇ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪವಾದಾಗ ನಾನು ಹೇಳಿದ್ದೇನೆ. ಮಾನ್ಯ ಭೈರೇಗೌಡರಿಗೆ ಇದರ ಬಗ್ಗೆ ಸಾಕಾಷ್ಟು ಉತ್ತರಗಳನ್ನು ಕೊಟ್ಟಿದ್ದೇನೆ. ಈಗ ಕೊಡಬಾರದು ಎನ್ನತಕ್ಕಂಥದ್ದಲ್ಲ, ಕೊಡುವುದಕ್ಕೆ ನಾವು ಸಿದ್ದವಾಗಿದ್ದೇವೆ. ಇದನ್ನು ಟೆಂಡರ್ ಟ್ರಾನ್ಸ್ಫೆರನ್ಸಿ ಆಕ್ಟ್ ಮೂಲಕವಾಗಿ ನಮಗೆ ಬಂದಿರುವಂಥ ಆ ಸಂದರ್ಭದಲ್ಲಿ ಸುಮಾರು ಕೇಂದ್ರ ಸರ್ಕಾರದಿಂದ 7.40 ಕೋಟಿ ರೂ.ಗಳು ರಾಜ್ಯ ಸರ್ಕಾರದ ಅನುದಾನ 4.04 ಕೋಟಿ ರೂ.ಗಳು ಒಟ್ಟು 11.44 ಕೋಟಿ ರೂಪಾಯಿಗಳು. ಇದರಲ್ಲಿ ಔಷಧಿಗಳನ್ನು ಖರೀದಿ ಮಾಡುವಾಗ ಆ ಟೆಂಡರ್ ಟ್ರಾನ್ಸ್ಫೆರೆನ್ಸಿ ಆಕ್ಟ್ ಪ್ರಕಾರವೇ ಮಾಡಿರುವುದು. ಅದನ್ನು ಮಾಡುವಾಗ ನಾವು ಯಾವ ಔಷಧಿಗಳನ್ನು ಬಳಕೆ ಮಾಡಬೇಕು ಎನ್ನುವುದನ್ನೂ ಕೂಡ ಸ್ವತಃ ನಾವೇ ತೀರ್ಮಾನ ತೆಗೆದುಕೊಂಡಿರತಕ್ಕಂಥದ್ದಲ್ಲ. ಅದನ್ನು ತಾಂತ್ರಿಕ ಸಲಹಾ ಸಮಿತಿಯವರು ಇಂತಹ ಔಷಧಿಗಳನ್ನೇ ತೆಗೆದುಕೊಳ್ಳಬೇಕೆಂದು ಸಲಹೆಯನ್ನು ಮಾಡಿದಂಥ ಸಂದರ್ಭದಲ್ಲಿ ಅಂತಹ ಔಷಧಿಗಳನ್ನು ತೆಗೆದುಕೊಂಡಿರುತ್ತೇವೆ. ಅವುಗಳನ್ನು ತೆಗೆದುಕೊಳ್ಳುವಾಗ ಟ್ರಾನ್ಸ್ಫೆರನ್ಸಿ ಆಕ್ಟ್ ಮೂಲಕವಾಗಿ

ಅದನ್ನು ತೆಗೆದುಕೊಂಡು ಆಯಾಯ ಜಿಲ್ಲೆಗಳಲ್ಲಿ ನಮ್ಮ ಸರ್ಕಾರಿ ಕೇಂದ್ರಗಳಾದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇಂತಹ ಮುಂತಾದ ಕೇಂದ್ರಗಳಿಂದ ಅದನ್ನು ವಿತವಣೆ ಮಾಡತಕ್ಕಂಥ ಕೆಲಸವನ್ನು ಮಾಡಿರುತ್ತೇವೆ. ಇದರಲ್ಲಿ ತಾವು ಅನುಮಾನವನ್ನು ಪಟ್ಟ ಹಾಗೆ ನಾನೂ ಕೂಡ ಇದರ ವಿಚಾರ ಪ್ರಸ್ತಾಪಕ್ಕೆ ಬಂದಾಗ ತುಂಬಾ ದೀರ್ಘವಾಗಿ ಅಧಿಕಾರಿಗಳ ಹತ್ತಿರ ಚರ್ಚೆಯನ್ನು ಮಾಡಿ ಸಂಬಂಧಪಟ್ಟ ವಿಜ್ಞಾನಿಗಳ ಜೊತೆಯಲ್ಲಿಯೂ ಕೂಡ ಚರ್ಚೆ ಮಾಡಿ ನಾವು ಯಾವುದನ್ನು ಮಾಡಬೇಕೆನ್ನುವಾಗ ಹಿಂದೆ ಯಾವ ಔಷಧಿಯನ್ನು ಕೊಟ್ಟಿದ್ದೆವು, ಅದಕ್ಕಿಂತ ಬೇರೆ ಯಾವ ಔಷಧಿ ಇನ್ನೊಂದಿಲ್ಲ ಎನ್ನತಕ್ಕಂಥ ಮನವರಿಕೆಯಾಯಿತು. ಆ ಸಂದರ್ಭದಲ್ಲಿ ಮಾತ್ರ ಉಪಯೋಗಿಸತಕ್ಕಂಥ ಔಷಧಿಗಳನ್ನು ಮಾತ್ರ ಅಲ್ಲ, ಮೊದಲಿನಿಂದಲೂ ಕೂಡ ಉಪಯೋಗಿಸಿಕೊಂಡು ಬಂದಂಥ ಔಷಧಿಗಳು. ಆದರೆ ಆ ಸಂದರ್ಭದಲ್ಲಿ ಮೂರು ರೀತಿಯಲ್ಲಿ ಕೊಡಬೇಕಾಗಿತ್ತು, ಅದನ್ನು ಯಾವ್ಯಾವಾಗ ಕೊಡಬೇಕು. ಅಂದರೆ ಯಾವ್ಯಾವ ಸ್ಥಳದಲ್ಲಿ ರೂಟ್‌ಇಂಜೆಕ್ಷನ್ ಮತ್ತು ಮೇಲ್ಪಟ್ಟ ಭಾಗದಲ್ಲಿ ಕೊಡಬೇಕಾದ ಸಂದರ್ಭದಲ್ಲಿ ಕೊಟ್ಟಂಥದ್ದು ಸ್ವಲ್ಪ ವ್ಯತ್ಯಾಸವಾಗಿರುವುದರಿಂದ ಆ ಮರಗಳಿಗೆ ಸ್ವಲ್ಪ ಹಾನಿಯಾಗಿದೆ ಇಲ್ಲವೆಂದು ನಾನು ತಿರಸ್ಕಾರವನ್ನು ಮಾಡುವುದಿಲ್ಲ. ಆ ಸಂದರ್ಭದಲ್ಲಿ ಬೇರೆ ಏನು ಆಗಿಲ್ಲವೆನ್ನುವುದನ್ನು ಹೇಳುತ್ತಾ, ಅದನ್ನು ಟ್ರಾನ್ಸ್‌ಫೆರೆನ್ಸಿ ಆಕ್ಟ್ ಪ್ರಕಾರವೇ ಮಾಡಿರುವಂಥದ್ದು ಯಾವುದೇ ರೀತಿಯಲ್ಲಿ ಕೂಡ ಯಾವ ದುರುಪಯೋಗವಾಗಿಲ್ಲವೆನ್ನುವ ಬಗ್ಗೆ ತಿಳಿಸಲಿಚ್ಚಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಭೈರೇಗೌಡರೆ, ನಮ್ಮ ಮುಂದೆ ಇನ್ನು 12 ಪ್ರಶ್ನೆಗಳು ಇವೆ, ತಾವು ಇದರ ಬಗ್ಗೆ ಹಿರಿಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಸಿ. ಭೈರೇಗೌಡ :- ನೀವು ಕೊಂಡಿರತಕ್ಕಂಥ ಔಷಧಿ ಪೂರ್ತಿಯಾಗಿ ಖರ್ಚಾಗದೆ ಎಕ್ಸ್‌ಪೈರಿ ಆಗಿರುವಂಥದ್ದು, ಅದಕ್ಕೆ ನೀವು ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ? ಅದನ್ನು ವಾಪಸ್ಸು ಪಡೆದಿದ್ದೀರಾ ಅಥವಾ ಅದನ್ನು ಪಡೆಯುವುದಕ್ಕೆ ನೀವು ಏನು ಮಾಡುತ್ತೀರಾ?

ಶ್ರೀ ಎಂ. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಭೈರೇಗೌಡರು ಹೇಳಿದ್ದು ನಿಜ. ನಾವು ಆ ಸಂದರ್ಭದಲ್ಲಿ ಔಷಧಿಗಳನ್ನು ಖರೀದಿಯನ್ನು ಮಾಡಿದೆವು. ಖರೀದಿಯನ್ನು ಏಕೆ ಮಾಡಿದೆವು ಎಂದರೆ, ಒಂದು ಗಿಡಕ್ಕೆ ಔಷಧಿಯನ್ನು ಹೊಡೆಯಬೇಕಾದರೆ, ಒಬ್ಬ ರೋಗಿಗೆ ಔಷಧಿಯನ್ನು ಕೊಡಬೇಕಾದರೆ ಆಸ್ಪತ್ರೆಯಲ್ಲಿ ಸ್ಟಾಕ್ ಇಟ್ಟುಕೊಳ್ಳಬೇಕೆಂದು ಹೇಳುತ್ತೀರಿ. ಆಯಾ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಇದನ್ನು ಕೊಂಡುಕೊಂಡು ಸ್ಟಾಕ್ ಇಟ್ಟುಕೊಳ್ಳಬೇಕಾದ ಸಂದರ್ಭ ಬಂತು. ಮತ್ತು ಆಯಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ಟಾಕ್ ಇಟ್ಟುಕೊಳ್ಳಬೇಕಾದ ಸಂದರ್ಭ ಬಂತು, ಯಾವಾಗ ಇದು ಹಾನಿಕಾರಕವೆಂದು ಪ್ರತಿರೋಧ ಬಂತು, ನಾವು ಆ ಸಂದರ್ಭದಲ್ಲಿ ಔಷಧಿಯನ್ನು ಸಿಂಪಡಣೆ ಮಾಡಿಸುವುದು ಬೇಡವೆಂದು ತೀರ್ಮಾನಕ್ಕೆ ಬಂದಾಗ ಅದು ಉಳಿದಿರುವುದು ನಿಜ. ಆ ಉಳಿದಂಥ ಔಷಧಿ ಎಕ್ಸ್‌ಪೈರಿ ಆಗಿದೆ ಯಾವುದು ಎಕ್ಸ್‌ಪೈರಿ ಆಗಿಲ್ಲ ಅಂತಹವುಗಳನ್ನು ಇಲಾಖೆಯಲ್ಲಿರತಕ್ಕಂಥ ನರ್ಸರಿಗಳು ಮತ್ತು ಅನೇಕ ಕಡೆಗಳಲ್ಲಿ ಈ ಕಪ್ಪುತೆಲೆ ಹುಳುಗಳಿಗೆ ಈ ಮೊನೊಕ್ರೊಟೊಪಾಸ್ ಔಷಧಿ ಬೇಕಾಗಿದೆ ಎಂದು ಬೇಡಿಕೆ ಬಂದಂಥ ಸಂದರ್ಭದಲ್ಲಿ ಅಂತಹ ಕಡೆಗಳಲ್ಲಿ ಕೊಡತಕ್ಕಂಥ ಆ ಕಡೆಗಳಲ್ಲಿ ಮಾಡಿರುತ್ತೇವೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದರು, ನಾವು ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡಿರುತ್ತೇವೆ, ಎಲ್ಲಿಯೂ ಕೂಡ

ಒಂದು ಮರವು ಹಾನಿಯಾಗಿಲ್ಲವೆನ್ನುವ ಮಾತನ್ನು ಹೇಳಿದರು. ಇಡೀ ಕ್ಷೇತ್ರವನ್ನು ನಾವು ಸುತ್ತುವಂಥ ಸಂದರ್ಭದಲ್ಲಿ ತಾವು ಕೊಟ್ಟಿರತಕ್ಕಂಥ ಔಷಧಿ ಕಾಂಡವನ್ನು ಕೊರೆದು ಇಂಜೆಕ್ಟ್ ಮಾಡಿದರು ಹಾಗೆ ಇಂಜೆಕ್ಟ್ ಮಾಡಿರುವ ಪೂರ್ತಿಯಾದ ಭಾಗ ಕೊಳೆತು ಹೋಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ತಾವು ಬರುವುದಾದರೆ ವಿಧಾನಸಭೆ ಕಳೆದ ನಂತರ ನಾವು ಅಥವಾ ಮಾನ್ಯ ಚೆನ್ನಿಗಪ್ಪ ಅಥವಾ ರೈತರ ಪರವಾಗಿ ಬಂದಿರತಕ್ಕಂಥ ಯಾವುದೇ ಶಾಸಕರು ಇರಬಹುದು. ನಾವು ಖಂಡಿತವಾಗಿ ತೋರಿಸಿ ಕೊಡುತ್ತೇವೆ. ತಾವು ಆದಿಚುಂಚನಗಿರಿ ಕ್ಷೇತ್ರಕ್ಕೆ ಬಂದಾಗ ಒಂದು ಕಾರ್ಯಕ್ರಮಕ್ಕೆ ಆ ಸಂದರ್ಭದಲ್ಲಿ ನಮ್ಮ ಸ್ವಾಮೀಜಿಯವರ ಪ್ಲಾಂಟೇಶನ್‌ದಲ್ಲಿ ಸುಮಾರು ಎರಡು ಸಾವಿರ ಮರಕ್ಕೆ ಆಗಿರುವಂಥದ್ದು ಅದರಲ್ಲಿ ನೂರಾರು ಗಿಡಗಳು ಕೊಳೆತು ಹೋಗಿರುತ್ತದೆ. ಅಧಿಕಾರಿಗಳು ಸಮರ್ಪಕವಾದ ಉತ್ತರವನ್ನು ಇಲ್ಲಿ ಕೊಡುವುದಿಲ್ಲ. ತಾವು ದಯಮಾಡಿ ಅಲ್ಲಿ ಒಂದು ಪರೀಕ್ಷೆಯನ್ನು ಮಾಡಬೇಕು. 11.44 ಕೋಟಿ ರೂ.ಗಳ ಔಷಧಿಯನ್ನು ಖರೀದಿ ಮಾಡಿದಿರಲ್ಲಾ ಈ ಔಷಧಿ ಏನಾದರೂ ಉಳಿದಿದ್ದರೆ ಅದನ್ನು ದಯಮಾಡಿ ಅದನ್ನು ರೈತರಿಗೆ ಕೊಡುವುದಕ್ಕೆ ಹೋಗಬೇಡಿ. ಅದು ಪೂರ್ಣವಾದ ಔಷಧಿ ಅಲ್ಲ. ಅದು ಆ್ಯಸಿಡ್. ಮಾನ್ಯ ಮಂತ್ರಿಗಳೇ, ಏಕೆಂದರೆ ನಾವು ಔಷಧಿಯನ್ನು ಹಾಕುವಂಥ ಸಂದರ್ಭದಲ್ಲಿ ಅನೇಕರು ಕೈಯನ್ನು ಕಳೆದುಕೊಂಡಿರುವಂಥದ್ದನ್ನು ನಾವು ಗಮನಿಸಿರುತ್ತೇವೆ. ಕೈಗಳು ಕೊಳೆತು ಹೋಗಿವೆ, ಆ ಔಷಧಿಯನ್ನು ಚಿಲ್ಲತಕ್ಕಂಥ ಸಂದರ್ಭದಲ್ಲಿ ಕಂಪ್ಲೀಟಾಗಿ ಹುಲ್ಲುಗಳೂ ಕೂಡ ಕೊಳೆತು ಹೋಗಿರುತ್ತವೆ. ತಾವು ಟ್ರಾನ್ಸ್‌ಫೆರನ್ಸಿ ಆಕ್ಟ್ ಪ್ರಕಾರವಾಗಿ ಏನು ಖರೀದಿ ಮಾಡಿದ್ದೇವೆಂದು ಹೇಳಿದಿರಿ, ಅದು 100 ಕ್ಕೆ 100 ಸುಳ್ಳು. ಅದನ್ನು ದಯಮಾಡಿ ಪರೀಕ್ಷೆ ಮಾಡುವುದಕ್ಕೆ ಕಳುಹಿಸಿ. ಪರೀಕ್ಷೆ ಮಾಡಿ ಹಾಕಿದರೆ ಸರಿ ಹೋಗುತ್ತದೆ. ಇಲ್ಲದಿದ್ದರೆ ಮರಗಳು ಕೊಳೆತು ಹೋಗುತ್ತವೆ. ಇತ್ತೀಚೆಗೆ ತಾಮ್ರದ ಮೊಳೆಯನ್ನು ಹೊಡೆದು ನಿಯಂತ್ರಣ ಮಾಡತಕ್ಕಂಥದ್ದು ಒಂದು ಚನ್ನರಾಯಪಟ್ಟಣ, ತುರುವೆಕೆರೆ ಮತ್ತು ತಿಪಟೂರು ವಿಭಾಗದಲ್ಲಿ ಬರುತ್ತಿದೆ. ಅದನ್ನು ದಯಮಾಡಿ ತಾವು ಪರೀಕ್ಷೆ ಮಾಡಬೇಕು. ಒಂದು ಮೊಳೆಗೆ 300 ರೂ.ಗಳಂತೆ ರೈತ ಕೊಂಡುಕೊಂಡು ಹೊಡೆಯುತ್ತಿದ್ದಾನೆ. ದಯಮಾಡಿ ಇದರ ಬಗ್ಗೆ ತಾವು ಪರೀಕ್ಷೆ ಮಾಡಬೇಕು.

ಶ್ರೀ ಎಂ. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ಇದನ್ನು ನಿಯಂತ್ರಣ ಮಾಡಬೇಕು ಎನ್ನುವ ವಿಚಾರದಲ್ಲಿ ಹಿಂದೆನೂ ಕೂಡ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಈಗಲೂ ನಾವು ಮಾಡುತ್ತಿದ್ದೇವೆ. ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಹಾಗೂ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಭಾಗದಲ್ಲಿ ಕೂಡ ಇರತಕ್ಕಂಥದ್ದು. ಇದಕ್ಕೋಸ್ಕರವಾಗಿ ನುಸಿರೋಗದ ತಡೆಯ ಬಗ್ಗೆ ಬರುವ 5ನೇ ತಾರೀಖಿನಂದು ಅಂತರಾಷ್ಟ್ರೀಯ ಮಟ್ಟದ ಒಂದು ಸಮ್ಮೇಳನದಲ್ಲಿ ಕೂಡ ಮೈಟ್‌ನ್ನು ಯಾವ ರೀತಿಯಾಗಿ ಕಂಟ್ರೋಲ್ ಮಾಡಬೇಕು ಎನ್ನುವುದರ ಬಗ್ಗೆ ಬೆಂಗಳೂರಿನಲ್ಲಿ ಒಂದು ಸಮಾವೇಶವಾಗುತ್ತಿದೆ. ಸಮಾವೇಶವಾಗುವ ಉದ್ದೇಶವೇನೆಂದರೆ, ಇದನ್ನು ನಾವು ಯಾವ ರೀತಿಯಾಗಿ ನಿಯಂತ್ರಣ ಮಾಡಬೇಕು ಎನ್ನುವುದರ ಬಗ್ಗೆ ಒಂದು ಸಮಗ್ರವಾದ ಮಾಹಿತಿಯನ್ನು ನೀಡತಕ್ಕಂಥ ದೃಷ್ಟಿಯಿಂದ, ಯಾರಿಗೂ ಇದರ ಬಗ್ಗೆ ಅನುಮಾನ ಬೇಡ ಎನ್ನುವುದರಿಂದ ಇದರ ಬಗ್ಗೆ ಇಲಾಖೆಯಿಂದ ಒಂದು ಏನೆಲ್ಲಾ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ನಾವು ಅದನ್ನು ಹಾಕಿಕೊಳ್ಳುತ್ತೇವೆಂದು ಮಾನ್ಯ ಸದನಕ್ಕೆ ತಿಳಿಯಬಯಸುತ್ತೇನೆ.

ಅಧ್ಯಕ್ಷರು :- ಮುಂದಿನ ಪ್ರಶ್ನೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ. ಸಮಯ ಸಿಕ್ಕರೆ ಕೊನೆಯಲ್ಲಿ ಕೇಳಿ, ಅದಕ್ಕೋಸ್ಕರ ಅವರ ಪ್ರಶ್ನೆಗಳು ಮುಗಿದು ಸಮಯ ಸಿಕ್ಕರೆ ಕೇಳಿ. ನನ್ನ ಅಭ್ಯಂತರ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಈಗ ನನ್ನ ಪ್ರಶ್ನೆ ಏನಾಯಿತು?

ಅಧ್ಯಕ್ಷರು :- ಹೇಳಿದ್ದೇನೆಲ್ಲಾ. ಅದನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಇಲ್ಲಿ ವಿನಂತಿ ಬೇಡ.

ಶ್ರೀ ಶಿವಾನಂದ ಎಸ್. ಪಾಟೀಲ್ :- 28ನೇ ತಾರೀಖಿನದ್ದು ಒಂದು ಪ್ರಶ್ನೆ ಇತ್ತು. ಅದನ್ನು ವರ್ಗಾಯಿಸಿಬಿಟ್ಟಿರಿ. 11ನೆ ತಾರೀಖಿನದ್ದು ಇತ್ತು, ಅದನ್ನೂ ವರ್ಗಾಯಿಸಿದ್ದೀರಿ. ಇವತ್ತಿನದ್ದೂ ಕೂಡ ವರ್ಗಾಯಿಸಿದ್ದಿರಿ.

ಅಧ್ಯಕ್ಷರು :- ಅದು ಇಲಾಖೆಯವರು ವರ್ಗಾಯಿಸಿದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಇವತ್ತಿನದ್ದೂ ವರ್ಗಾಯಿಸಿದ್ದೀರಿ. ಇಲ್ಲಾವಾದರೆ ತಾವು ಸುಮ್ಮನೆ ಹೇಳಿಬಿಡಿ ಸದನಕ್ಕೆ ಬರಬೇಡಿ. ಸುಮ್ಮನೆ ಆರಾಮವಾಗಿ ಇದ್ದುಬಿಡಿ ಎಂದು. ತಾವು ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ.

ಅಧ್ಯಕ್ಷರು :- ಇದು ಕೋಪದ ಪ್ರಶ್ನೆ ಅಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ತಾವು ನಮಗೆ ನ್ಯಾಯ ಕೊಡಬೇಕು.

(ಗೊಂದಲ)

ಅಧ್ಯಕ್ಷರು :- ನೀವು ನನ್ನ ಚೇಂಬರ್‌ಗೆ ಬಂದು ಮಾತನಾಡುವುದನ್ನು ಇಲ್ಲಿ ಮಾತನಾಡಿದರೆ ಆಗುತ್ತದಾ? ನಾಯಕರು ಸ್ವಲ್ಪ ಅವರಿಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :- ಮೂರು ಪ್ರಶ್ನೆಗಳು ಟ್ರಾನ್ಸ್‌ಫರ್ ಆಗಿವೆ. ಇದಕ್ಕೆ ಏನಾದರೂ ಮಾಡಬೇಕಲ್ಲಾ?

ಅಧ್ಯಕ್ಷರು :- ಅದಕ್ಕೆ ನಾನೇನು ಮಾಡಲಿ? ಡಿಪಾರ್ಟಮೆಂಟಿನವರು ಟ್ರಾನ್ಸ್‌ಫರ್ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ನೀವೇ ನಮಗೆ ರಕ್ಷಣೆಗೆ ಬರಬೇಕು. ಮೂರು ಪ್ರಶ್ನೆಗಳು ಟ್ರಾನ್ಸ್‌ಫರ್ ಆಗಿವೆ. ಹೀಗಾದರೆ ಹೇಗೆ?

ಶ್ರೀ ಶಿವಾನಂದ ಎಸ್. ಪಾಟೀಲ್ :- 28ನೇ ತಾರೀಖಿನದ್ದು, 11ನೇ ತಾರೀಖಿನದ್ದು ಮತ್ತು ಇವತ್ತಿನ ಪ್ರಶ್ನೆ - ಎಲ್ಲವನ್ನೂ ವರ್ಗಾವಣೆ ಮಾಡಿದ್ದೇನೆ ಎಂದು ಹೇಳುತ್ತಿದ್ದೀರಿ. ಸೋಮವಾರ ದಿವಸ ಸದನವನ್ನು ಮುಗಿಸುತ್ತಿದ್ದೀರಿ.

ಅಧ್ಯಕ್ಷರು :- ನಾನು ಮಾಡಿಲ್ಲ. ಡಿಪಾರ್ಟಮೆಂಟ್‌ನವರು ವರ್ಗ ಮಾಡಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಹೌದು ಅಧ್ಯಕ್ಷರೇ, ನೀವು ಸರ್ಕಾರಕ್ಕೆ ಕೇಳಬೇಕು. ಹಾಗಾದರೆ ನಾವು ಸದನಕ್ಕೆ ಏಕೆ ಬರಬೇಕು?

ಅಧ್ಯಕ್ಷರು :- ತಾವು ಅಲ್ಲಿಗೆ ಬನ್ನಿ, ಮಾತನಾಡುತ್ತೇನೆ. See, I can't waste my time here.

SRI SHIVANANDA S PATIL:- Is it a wasting of time, Sir?

Mr. SPEAKER:- I am not wasting your time. I am wasting my time.

SRI SHIVANANDA S PATIL:- My time is also precious.

ಅಧ್ಯಕ್ಷರು :- ಬನ್ನಿ, ಅಲ್ಲಿ ಮಾತನಾಡೋಣ. ಈಗ ಇನ್ನೂರು ಜನರು ಬಂದು ನಮ್ಮ ಪ್ರಶ್ನೆ ಏನು ಮಾಡುತ್ತೀರಿ ಎಂದರೆ, ಎಲ್ಲರೂ ಎದ್ದುನಿಂತರೆ ನಾನು ಹೇಗೆ ಉತ್ತರ ಕೊಡಲಿ? ನೀವು ಅಲ್ಲಿಗೆ ಬನ್ನಿ. ಸಂಬಂಧಪಟ್ಟ ಇಲಾಖೆಗೆ ಫೋನ್ ಮಾಡೋಣ. ಅಲ್ಲಿಗೆ ಬನ್ನಿ, ಇಲ್ಲಿ ಅಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಹಾಗಾದರೆ ನಾನು ಅಲ್ಲೇ ಕೇಳುತ್ತೇನೆ. ಇನ್ನು ಮೇಲೆ ಸದನದಲ್ಲಿ ಪ್ರಶ್ನೆಯನ್ನೇ ಕೇಳುವುದಿಲ್ಲ.

ಅಧ್ಯಕ್ಷರು :- ಪುಟ್ಟರಂಗನಾಥ್‌ರವರೇ, ಮುಂದಿನ ಪ್ರಶ್ನೆ ಕೇಳಿ. ಪ್ರಶ್ನೆ ಸಂಖ್ಯೆ 1773.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಮಾನ್ಯ ಸಭಾಧ್ಯಕ್ಷರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳು ತುರ್ತಾಗಿ ದೆಹಲಿಗೆ ಹೋಗಿದ್ದಾರೆ.

ಅಧ್ಯಕ್ಷರು :- ಹೌದು. ಅವರು ಇಲ್ಲ, ಡೆಲ್ಲಿಗೆ ಹೋಗಿದ್ದಾರೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ನನ್ನದು ನಾಲ್ಕು ಪ್ರಶ್ನೆಗಳು ಬಂದಿದ್ದವು. ಒಂದಕ್ಕೂ ಉತ್ತರ ಕೊಡುವುದಿಲ್ಲ ಎಂದರೆ ಹೇಗೆ? ಮಂತ್ರಿಗಳು ಇಲ್ಲವೆಂದರೆ ಅವರು ಬೇರೆಯವರಿಗೆ ವಹಿಸಿಕೊಟ್ಟು ಹೋಗಬೇಕು.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಸೋಮವಾರ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು :- ಆಯಿತು. ಸೋಮವಾರ ಹಾಕಿಕೊಳ್ಳೋಣ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಸೋಮವಾರ ಅಧಿವೇಶನ ಮುಗಿಯುತ್ತದೆ. ನನ್ನ ಪ್ರಶ್ನೆಗಳಿಗೆ ಒಂದಕ್ಕೂ ಉತ್ತರ ಇಲ್ಲ. ನೀವು ಮಂತ್ರಿಗಳಿಗೆ ಹೇಳಬೇಕು. ಅವರು ಇಲ್ಲವೆಂದರೆ ಬೇರೆಯವರಿಗೆ ಕೊಟ್ಟು ಹೋಗಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಮಂತ್ರಿಗಳು ಬರದೇ ಇದ್ದರೆ ಬೇರೆಯವರಿಗೆ ಮಹಿಸಬೇಕು. ಹಾಗಾದರೆ ನಾವು ಶಾಸನಸಭೆಯಲ್ಲಿ ಪ್ರಶ್ನೆ ಕೇಳುವುದು ಯಾಕೆ ಮತ್ತು ಈ ಸದನ ಇರುವುದು ಏಕೆ? ಈ ಕಡೆ ಕೆಲವು ಪ್ರಶ್ನೆಗಳು ಟ್ರಾನ್ಸ್‌ಫರ್ ಆಗುತ್ತವೆ, ಆ ಕಡೆ ಮಂತ್ರಿಗಳು ಇರುವುದಿಲ್ಲ.

ಶ್ರೀ ಸಿ. ಎಸ್. ಸಗೀರ್ ಅಹಮದ್ :- ಶ್ರೀಮತಿ ಮೋಟಮ್ಮನವರ ಪರವಾಗಿ ಪಾಟೀಲರು ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿಗಳು) :- ಅಧ್ಯಕ್ಷರೇ, ನಾನು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಅವರ ಪರವಾಗಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :- ಹಾಗಾದರೆ ಪುಟ್ಟರಂಗನಾಥ್‌ರವರೇ, ನೀವು ಪ್ರಶ್ನೆ ಕೇಳಿ.